ಈ) ಹೌದು

ಉ) ಹೌದು ಇದಕ್ಕೆ ಬದಲಿ ವ್ಯವಸ್ಥೆ ಅಂದರೆ ರೆವಿನ್ಯೂ ಸ್ಟಾಂಪುಗಳ ಉಪಯೋಗದ ಬಗ್ಗೆ ರಿಯಾಯಿತಿ ನೀಡಲು ಕರ್ನಾಟಕ ರಾಜ್ಯಕ್ಕೆ ಸೀಮಿತವಾದಂತೆ ಭಾರತೀಯ ಮುದ್ರಾಂಕ ಕಾಯಿದೆ ಅಡಿ ಹೊಸ ವಿದಿ 9–ಬಿ ಯನ್ನು ಸೇರ್ಪಡೆ ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಊ) 2002–2003 ನೇ ಸಾಲಿನಲ್ಲಿ ರಾಜ್ಯದ ಖಜಾನೆಗಳಲ್ಲಿ ಒಟ್ಟು ರೂ. 11.33 ಕೋಟಿ ಖಜಾನೆಗಳಲ್ಲಿ ಒಟ್ಟು ರೂ. 11.33 ಕೋಟಿ ರೂಪಾಯಿಗಳ ರೆವಿನ್ಯೂ ಸ್ಟಾಂಪ್ ಮಾರಾಟವಾಗಿದೆ.

ಗುಲ್ಬರ್ಗಾ ನಗರದ ಐವಾನ್.ಎ. ಷಾಹಿ ಪ್ರದೇಶದ ಸರ್ಕಾರಿ ಜಮೀನನ್ನು ಖಾಸಗಿಯವರು ಕಬಳಿಕೆ ಮಾಡಿರುವುದು

3824(4627 : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ನಗರದ ಐವಾನ್ – ಎ–ಷಾಹಿ ಪ್ರದೇಶದ ಸುತ್ತುಮುತ್ತ ಇರುವ ಸರ್ಕಾರಿ ಜಮೀನಿನ ವಿಸ್ತೀರ್ಣ ಎಷ್ಟು;

ಆ) ಈ ಜಮೀನನ್ನು ಯಾವ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ; ಈ ಜಮೀನಿನ ಬೆಲೆ ಎಷ್ಟು;

ಇ) ಈ ಜಮೀನನ್ನು ಖಾಸಗಿಯವರು ಭೂ ಕಬಳಿಕೆ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದ್ದೆಯೇ;

ಈ) ಬಂದಿದ್ದೆರೆ, ಈ ಜಮೀನನ್ನು ಖಾಸಗಿಯವರು ಭೂ ಕಬಳಿಕೆ ಮಾಡಿದ್ದರೂ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯದಿಂದಿರಲು ಕಾರಣವೇನು;

ಉ) ಈ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಊ) ಭೂ ಕಬಳಿಕೆದಾರರಿಂದ ಈ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ಗುಲ್ಬರ್ಗಾ ನಗರದ ಐವಾನ್–ಎ–ಷಾಹಿ ಪ್ರದೇಶಕ್ಕೆ ಹೊಂದಿಕೊಂಡಂತೆ (1) ಬಡೇಪೂರ (2) ಬ್ರಹ್ಮಪೂರ (3) ದರಿಯಾಪೂರ (4) ದದ್ದಾಪೂರ (5) ನಾಗನಹಳ್ಳಿ, ಗ್ರಾಮಗಳಲ್ಲಿ 188.27 ಎಕರೆ ಸ್ವಾಧೀನ ಪಡಿಸಿಕೊಂಡ ಸರ್ಕಾರಿ ಜಮೀನು ಇರುತ್ತದೆ.

ಆ) 1959ರಲ್ಲಿ ಶಿಕ್ಷಣದ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಇ) ಹೌದು.

ಈ) ಇತ್ತೀಚೆಗೆ ಗಮನಕ್ಕೆ ಬಂದಿದೆ. ಆದ್ದರಿಂದ ಭೂ ಕಬಳಿಕೆ ಜಮೀನು ತೆರವುಗೊಳಿಸಿ ಸರಕಾರದ ವಶಕ್ಕೆ ತೆಗೆದುಕೊಳ್ಳುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಮೇಲ್ಕಂಡ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸವುದಿಲ್ಲ.

ಉ) ಸದರಿ ಜಮೀನಿನ ದಾಖಲೆಗಳಾದ ಪಹಣಿ ಪತ್ರಿಕೆಯಲ್ಲಿ ಸರ್ಕಾರದ ಮಾಲೀಕತ್ವದ ಬಗ್ಗೆ ದಾಖಲಿಸಿ, ಕಬಳಿಕೆಯಿಂದ ಮುಕ್ತಗೊಳಿಸುವ ಕ್ರಮ ಜರುಗಿಸಲಾಗುತ್ತಿದೆ.

ಸ್ವಾತಂತ್ರೋತ್ಸವದ 28ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಉಚಿತ ನಿವೇಶನ ಹಂಚಿಕೆ

3827 (3553) : ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?